# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 767 (934)
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 24-02-2022
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗೃಹ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೋಂಗಾರ್ಡ್ಸ್‌ಗಳ ಸಂಖ್ಯೆ ಎಷ್ಟು (ಪುರುಷ ಮತ್ತು ಮಹಿಳೆ ಪ್ರತ್ಯೇಕವಾಗಿ) ವಿವರ ನೀಡುವುದು: | ರಾಜ್ಯ ಗೃಹರಕ್ಷಕದಳ ಇಲಾಖೆಯಲ್ಲಿ ನೊಂದಣಿಯಾಗಿರುವ ಗೃಹರಕ್ಷಕರ ಸಂಖ್ಯಾ ಬಲ 26,317 (ಪುರುಷ-22,057 ಮತ್ತು ಮಹಿಳಾ-4,260) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಇವರು ನಿರ್ವಹಿಸುತ್ತಿರುವ ಕಾರ್ಯಗಳೇನು; ಮತ್ತು ಇವರ ಕೆಲಸದ ಅವಧಿ ಏನು: ಅವಧಿ ಮೀರಿ ನಿರ್ವಹಿಸುವ ಕರ್ತವ್ಯಕ್ಕೆ ಓವರ್ ಟೈಂ ಭತ್ಯೆ ನೀಡಲಾಗುತ್ತಿದೆಯೇ ಹಾಗಿದ್ದಲ್ಲಿ, ವಿವರ ನೀಡುವುದು: | ವಿವಿಧ ಇಲಾಖೆಗಳಿಗೆ (ಪೊಲೀಸ್ & ಇತರೆ ಇಲಾಖೆ) ಗೃಹರಕ್ಷಕರನ್ನು ಪಹರೆ ಕರ್ತವ್ಯಕ್ಕೆ ನಿಯೋಜಿಸಲಾಗುತ್ತದೆ. ಎಂಟು ಗಂಟೆಗೆ ಮೀರದಂತೆ ಕರ್ತವ್ಯಕ್ಕೆ ನಿಯೋಜಿಸಿಕೊಳ್ಳಲು ಷರತ್ತುಗಳಲ್ಲಿ ನಮೂದಿಸಲಾಗಿರುತ್ತದೆ. ಎಂಟು ಗಂಟೆ ಮೀರದಂತೆ ಕರ್ತವ್ಯಕ್ಕೆ ನಿಯೋಜಿಸಿಕೊಳ್ಳಲು ಷರತ್ತುಗಳಲ್ಲಿ ನಮೂದಿಸಿರುವುದರಿಂದ ಓವರ್ ಟೈಂ ಭತ್ಯೆ ನೀಡುವ ವ್ಯವಸ್ಥೆ ಇರುವುದಿಲ್ಲ. |
| ಇ) | ಪೊಲೀಸ್ ಪೇದೆ ನೇಮಕ ಸಂದರ್ಭದಲ್ಲಿ ಸದರಿಯವರನ್ನು ಯಾವ ರೀತಿ ಪರಿಗಣಿಸಲಾಗುತ್ತಿದೆ: | ಗೃಹರಕ್ಷಕ ದಳವು ನಿಷ್ಕಾಮ ಸೇವೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪೊಲೀಸ್ ಪೇದೆ ನೇಮಕ ಸಂದರ್ಭದಲ್ಲಿ ಪ್ರಸ್ತುತ ಗೃಹರಕ್ಷಕರನ್ನು ಪರಿಗಣಿಸಲು ಯಾವುದೇ ಅವಕಾಶವಿರುವುದಿಲ್ಲ. |
| ಈ) | ಹೋಂಗಾರ್ಡ್ಸ್ ಭತ್ಯೆ ಮೇಲೆ ಅವಲಂಬಿತರಾಗಿರುವ ಬಹುತೇಕ ಕುಟುಂಬಗಳ ಬಗ್ಗೆ ಸರ್ಕಾರದ ಮನೋಭೂಮಿಕೆ ಏನು (ವಿವರ ನೀಡುವುದು) | ಗೃಹರಕ್ಷಕದಳದ ಸಂಸ್ಥೆಯು ಮೂಲತಃ ಒಂದು ಸ್ವಯಂಸೇವಾ ಸಂಸ್ಥೆಯಾಗಿದ್ದು, ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಕಾರ್ಯನಿರತವಾಗಿರುತ್ತದೆ. ಗೃಹರಕ್ಷಕರು ಸರ್ಕಾರಿ ನೌಕರರಾಗಿರುವುದಿಲ್ಲ. ಇವರಿಗೆ ಯಾವುದೇ ವೇತನ ಇರುವುದಿಲ್ಲ. ಇವರುಗಳನ್ನು ಕರ್ತವ್ಯಕ್ಕೆ ನಿಯೋಜಿಸಿದ ಸಂದರ್ಭಗಳಲ್ಲಿ ಮಾತ್ರ ಅವರಿಗೆ ಕರ್ತವ್ಯ ಭತ್ಯೆಯನ್ನು ನೀಡಲಾಗುತ್ತಿದೆ. |
| ಉ) | ಮಹಿಳಾ ಹೋಂಗಾರ್ಡ್ಸ್‌ಗಳಿಗೆ ಸರ್ಕಾರ ನೀಡುವ ವಿಶೇಷ ಸವಲತ್ತುಗಳೇನು? | ರಾಜ್ಯ ಗೃಹರಕ್ಷಕದಳ ಕೇಂದ್ರ ಕಚೇರಿ, ಅಕಾಡೆಮಿ ಹಾಗೂ ಜಿಲ್ಲಾ ಕಚೇರಿಗಳಲ್ಲಿ ಮಹಿಳಾ ಹೋಂಗಾರ್ಡ್ಸ್‌ಗಳಿಗೆ ಪ್ರತ್ಯೇಕ ಡಾರ್ಮಿಟರಿ, ಶೌಚಾಲಯ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ. |

ಸಂಖ್ಯೆ: ಒಇ 20 ಕಗೃಸೇ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 767 (934) ಕ್ಕೆ ಅನುಬಂಧ

### ಗೃಹರಕ್ಷಕರ ವಾಸ್ತವಿಕ ಸಂಖ್ಯಾ ಬಲದ ವಿವರ:-

| ಕ್ರ ಸಂ | ಜಿಲ್ಲೆಯ ಹೆಸರು | ಘಟಕಗಳ ಸಂಖ್ಯೆ | ಹಂಚಿಕೆಯಾದ ಸಂಖ್ಯಾಬಲ | ಗೃಹರಕ್ಷಕರ ಸಂಖ್ಯೆ | | ವಾಸ್ತವಿಕ ಸಂಖ್ಯಾ ಬಲ | ಖಾಲಿ |
|---|---|---|---|---|---|---|---|
| | | | | ಪುರುಷ | ಮಹಿಳೆ | | |
| 1. | ಬೆಂಗಳೂರು ಉತ್ತರ | 17 | 1850 | 966 | 858 | 1824 | 26 |
| 2. | ಬೆಂಗಳೂರು ಗ್ರಾಮಾಂತರ | 15 | 1650 | 966 | 421 | 1387 | 263 |
| 3. | ಬೆಂಗಳೂರು ದಕ್ಷಿಣ | 15 | 1850 | 1075 | 726 | 1801 | 49 |
| 4. | ಬಾಗಲಕೋಟೆ | 22 | 1000 | 802 | 91 | 893 | 107 |
| 5. | ಬೆಳಗಾವಿ | 30 | 1350 | 1192 | 60 | 1252 | 98 |
| 6. | ಬಳ್ಳಾರಿ | 14 | 1500 | 1293 | 70 | 1363 | 137 |
| 7. | ಬೀದರ್ | 15 | 1000 | 854 | 125 | 979 | 21 |
| 8. | ಚಿಕ್ಕಮಗಳೂರು | 20 | 800 | 467 | 92 | 559 | 241 |
| 9. | ಚಾಮರಾಜನಗರ | 09 | 700 | 630 | 64 | 694 | 06 |
| 10. | ಚಿತ್ರದುರ್ಗ | 14 | 700 | 565 | 60 | 625 | 75 |
| 11. | ಚಿಕ್ಕಬಳ್ಳಾಪುರ | 07 | 700 | 473 | 91 | 564 | 136 |
| 12. | ಧಾರವಾಡ | 08 | 800 | 496 | 138 | 634 | 166 |
| 13. | ದಾವಣಗೆರೆ | 13 | 651 | 575 | 64 | 639 | 12 |
| 14. | ದಕ್ಷಿಣಕನ್ನಡ | 14 | 1000 | 588 | 241 | 829 | 171 |
| 15. | ಗದಗ | 11 | 700 | 700 | 0 | 700 | 0 |
| 16 | ಕಲಬುರಗಿ | 09 | 1000 | 906 | 87 | 993 | 07 |
| 17 | ಹಾಸನ | 30 | 1200 | 923 | 61 | 984 | 216 |
| 18. | ಹಾವೇರಿ | 08 | 700 | 498 | 51 | 549 | 151 |
| 19. | ಕೊಡಗು | 09 | 500 | 193 | 59 | 252 | 248 |
| 20. | ಕೋಲಾರ | 10 | 1200 | 865 | 147 | 1012 | 188 |
| 21. | ಕೊಪ್ಪಳ | 13 | 700 | 635 | 61 | 696 | 04 |
| 22. | ಮಂಡ್ಯ | 12 | 949 | 612 | 61 | 673 | 276 |
| 23. | ಮೈಸೂರು | 10 | 1300 | 934 | 151 | 1085 | 215 |
| 24. | ರಾಯಚೂರು | 11 | 800 | 729 | 33 | 762 | 38 |
| 25. | ರಾಮನಗರ | 09 | 700 | 365 | 42 | 407 | 293 |
| 26. | ಶಿವಮೊಗ್ಗ | 15 | 1000 | 753 | 97 | 850 | 150 |
| 27. | ತುಮಕೂರು | 18 | 900 | 728 | 108 | 836 | 64 |
| 28. | ಉಡುಪಿ | 08 | 500 | 363 | 64 | 427 | 73 |
| 29. | ಉತ್ತರಕನ್ನಡ | 15 | 900 | 625 | 85 | 710 | 190 |
| 30. | ವಿಜಯಪುರ | 12 | 800 | 692 | 52 | 744 | 56 |
| 31. | ಯಾದಗಿರಿ | 07 | 600 | 594 | 0 | 594 | 06 |
| ಒಟ್ಟು | | 420 | 30,000 | 22,057 | 4,260 | 26,317 | 3,683 |